

ಬಾರ್ ತೆರೆದು ಅಲ್ಲೇ ಕೆಲಸ ಮಾಡುತ್ತಿದ್ದ. ಅನಂತರ ಅಮೆರಿಕೆಯ ಪ್ರಿನ್ಸಟನ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿ ಕೂಡ ಕೆಲಸ ಮಾಡಿದ್ದಾನೆ.

**Hear the Wind Sing, HardBoiled Wonderland and the End of the World, Norwegian Wood, Japan; The Wind–Up Bird Chronicle, Kafka on the Shore, Blind Willow, Sleeping Woman** ಮೊದಲಾದ ಕಾದಂಬರಿಗಳು ಹಾಗೂ ಕಥಾಸಂಕಲನಗಳನ್ನು ಪ್ರಕಟಿಸಿದ್ದಾನೆ. ಇವನ ಕೃತಿಗಳು 50 ಭಾಷೆಗಳಿಗೆ ಅನುವಾದಗೊಂಡಿವೆ. ಸ್ವತಃ ಅನುವಾದಕನಾಗಿರುವ ಮುರಕಮಿ ಜಪಾನಿ ಭಾಷೆಗೆ ತನ್ನ ನೆಚ್ಚಿನ ಲೇಖಕರ ಕೃತಿಗಳನ್ನು ಅನುವಾದಿಸಿದ್ದಾನೆ.

ಇವನ ಕೆಲವು ಕತೆಗಳು ಸಿನಿಮಾಗಳಾಗಿವೆ. ಸ್ವತಃ ಮ್ಯಾರಥಾನ್ ಪಟುವಾಗಿದ್ದು ತನ್ನ ಅನುಭವವನ್ನು **'What I Talk About When I Talk About Running'** ಎನ್ನುವ ಪುಸ್ತಕದಲ್ಲಿ ಬರೆದುಕೊಂಡಿದ್ದಾನೆ. ಗುನ್ಝೊ ಪ್ರಶಸ್ತಿ, ನೊಮ ಸಾಹಿತ್ಯಿಕ ಪ್ರಶಸ್ತಿ, ವರ್ಲ್ಡ್ ಫ್ಯಾಂಟಸಿ ಪ್ರಶಸ್ತಿ, ಅಮೆರಿಕನ್ ಅವಾರ್ಡ್ ಇನ್ ಲಿಟರೇಚರ್, ಹೀಗೆ ಹಲವು ಪ್ರಶಸ್ತಿಗಳು ಮುರಕಮಿಗೆ ಸಂದಿವೆ.

'ದ ಪ್ಯಾರಿಸ್ ರಿವ್ಯೂ' ಪತ್ರಿಕೆಯ 170ನೇ ಸಂಚಿಕೆ(2004)ಯಲ್ಲಿ ಪ್ರಕಟವಾದ ಸಂದರ್ಶನದ ಆಯ್ದ ಭಾಗಗಳನ್ನು ಇಲ್ಲಿ ಕೊಡಲಾಗಿದೆ.

◆ **ನಿಮ್ಮ 'After the Quake' ಕಥಾಸಂಕಲನ ಓದಿದೆ. ಅದರಲ್ಲಿ ರಿಯಲಿಸಂ ಹಾಗೂ ಸರ್ರಿಯಲಿಸಂ ಎರಡೂ ಶೈಲಿಯ ಕತೆಗಳಿವೆ. ಇವೆರೆಡರ ನಡುವಿನ ವ್ಯತ್ಯಾಸವೇನು?**